


ಹೂವಿನ ಅಂದ, ಘಮಲು, ಬಣ್ಣಕ್ಕೆ ಮನಸೋಲದವರಾರು? ಹೂವು ಎಂದರೆ ಸೌಂದರ್ಯ, ಮೃದುತ್ವ, ಕೋಮಲತೆ, ಸುಗಂಧ, ಮಧುರ ಭಾವನೆ... ಹೀಗೆ ಹೂವಿಗೆ ಇರುವ ವಿಶೇಷಣಗಳು ಹಲವು. ಹೆಣ್ಣನ್ನು ಹೂವಿಗೆ ಹೋಲಿಸುವುದರ ಜೊತೆಗೆ 'ಹೂವಿನಂಥ ಮನಸ್ಸು' ಎಂಬುದು ಕೂಡ ಹೆಣ್ಣಿಗೆ ತಕ್ಕುದಾದ ಉಪಮೆ. ಪ್ರಕೃತಿಯ ಮಡಿಲಿನಲ್ಲಿ ಅರಳಿ ನಗುವ ಬಗೆ ಬಗೆಯ ಹೂವುಗಳನ್ನು ಒಡಲಲ್ಲಿ ತುಂಬಿಕೊಂಡು ಅದನ್ನು ದೇವರಿಗೇರಿಸಲೋ ಹೆಣ್ಣಿನ ಮುಡಿಗೇರಿಸುವುದೋ ಎಂಬ ಸಣ್ಣ ಅನುಮಾನ ಕಾಡುತ್ತದೆ. ಹೂವು ಸಾರ್ಥಕ್ಯ ಪಡೆಯುವುದು ಆಗಲೇ.

ಹಾಗೆ ನೋಡಿದರೆ ಕೆಲವು ಸುಗಂಧಿತ, ಸುಂದರ ಹೂವುಗಳ ಆಯುಷ್ಯ ಅತ್ಯಲ್ಪ ಕಾಲದ್ದು. ಆದರೂ ಅವುಗಳು ಕಣ್ಮನಗಳಿಗೆ ನೀಡುವ ಆನಂದ ಮಾತ್ರ ಅಪರಿಮಿತ. ಅರ್ಚನೆ, ಆರಾಧನೆ, ಅಲಂಕಾರ, ಹೆಂಗಳೆಯರ ಮುಡಿಗೆ, ಸೌಂದರ್ಯವರ್ಧನೆಗೆ, ಅತ್ತರಿನ ತಯಾರಿಕೆಗೆ, ಆರೋಗ್ಯ ಪಾಲನೆಗೆ... ಹೀಗೆ ಹೂವುಗಳ ಉಪಯೋಗ ಒಂದೆರಡಲ್ಲ. ಕೆಲವು ಹೂವುಗಳ ಘಮಲಿನಲ್ಲಿ ಮಾದಕಶಕ್ತಿಯಿದೆ. ಮಲ್ಲಿಗೆ ಸಂಪಿಗೆ, ಕೇದಿಗೆ, ಪಾರಿಜಾತ, ಸುಗಂಧರಾಜ ಮುಂತಾದ ಹೂವುಗಳ ಘಮಲನ್ನು ಆಘ್ರಾಣಿಸಿ, ಆಸ್ವಾದಿಸದ ಸಹೃದಯರೇ ಇಲ್ಲ ಎನ್ನಬಹುದು.

ಕವಿಗಳ ಪಾಲಿಗಂತೂ ಹೂವುಗಳ ಒಂದು ಅತ್ಯುತ್ತಮ ವಸ್ತು. ಕಲ್ಪನೆಯ ಗರಿಗೆದರಿ ಭಾವನೆಗಳ ಅಭಿವ್ಯಕ್ತಿಗೆ ಹೂವುಗಳ ಪಾತ್ರ ಬಹಳ ಪ್ರಮುಖವಾದದ್ದು. ಅದಕ್ಕಾಗಿಯೇ ಹೂವುಗಳ ಮೇಲೆ ಅಷ್ಟೊಂದು ಸಿನಿಮಾ ಹಾಡುಗಳು ರಚಿತವಾಗಿರುವುದು.

'ಹಣ್ಣೆಲೆ ಚಿಗುರಿದಾಗ..' ಸಿನಿಮಾದ 'ಹೂವು ಚೆಲುವೆಲ್ಲಾ ನಂದೆಂದಿತು..' ಗಾಯಕಿ ಪಿ. ಸುಶೀಲಾ ಧ್ವನಿಯಲ್ಲಿ ಮೂಡಿಬಂದ ಈ ಹಳೆಯ ಹಾಡು ಕೇಳಿದರೆ ಮತ್ತೆ ಮತ್ತೆ ಕೇಳಬೇಕು ಎಂಬಷ್ಟು ಇಂಪು. 70ರ ದಶಕದಲ್ಲಿ ಬಂದ 'ಕಿಲಾಡಿ ಕಿಟ್ಟು' ಸಿನಿಮಾದ 'ಹೂವಂತೆ ಹೆಣ್ಣು ನಗುತಿರಬೇಕು; ಮನದಲ್ಲಿ ಶಾಂತಿ ತುಂಬಿರಬೇಕು..' ಖ್ಯಾತ ಗಾಯಕ ಕೆ.ಜೆ. ಯೇಸುದಾಸ್ ಶಾರೀರದಲ್ಲಿ ಸುಶ್ರಾವ್ಯವಾಗಿ ತೇಲಿಬಂದಿದ್ದು, ಹೂವು–ಹೆಣ್ಣಿಗಿರುವ ಅನನ್ಯ ಸಂಬಂಧ ಬಿಂಬಿತವಾಗಿದೆ.

ಶಿವಶರಣೆ ಅಕ್ಕಮಹಾದೇವಿ ವಚನ 'ಹೂವು ಗಂಧ ಚೆಲ್ಲಿ ಪರಿಮಳವನರಸುವರೋ...' ಕೃತಿ ಹೂವಿನ ಅಂದದ ವರ್ಣನೆಯಲ್ಲದೆ ಇನ್ನೇನು?

'ಬೆಸುಗೆ' ಚಿತ್ರದ 'ಯಾವ ಹೂವು ಯಾರ ಮುಡಿಗೊ, ಯಾರ ಒಲವು ಹಾರ ಕಡೆಗೊ' ಹಾಡನ್ನು ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ಹಾಡಿದ್ದು ಆ ಹಾಡಿನ ಕಂಪು ಎಂದಿಗೂ ಮರೆಯುವಂಥದಲ್ಲ. ಹೀಗೆ ಹೂವಿಗೂ– ಹಾಡಿಗೂ, ಹೂವಿಗೂ–ಹೆಣ್ಣಿಗೂ ಇರುವ ಬಾಂಧವ್ಯ ಇಂದು ನಿನ್ನೆಯದಲ್ಲ. ಪರಿಮಳ ಸೂಸುವ ಕೆಲವು ಹೂವುಗಳು ಎಲ್ಲ ಕಾಲದಲ್ಲಿಯೂ ಲಭ್ಯವಿರುವುದಿಲ್ಲ. ಆದರೆ ಇನ್ನು ಕೆಲವು ಹೂವುಗಳು ಎಲ್ಲ ಕಾಲದಲ್ಲೂ ಕೈಗೆಟುಕಿ ತನ್ನ ಸುಕೋಮಲತೆಯನ್ನು ಸಾರುತ್ತವೆ.



ಮದುವೆಗೂ ಹೂವಿಗೂ ಅನನ್ಯ ನಂಟು

ಹಿಂದಿನ ಕಾಲದಲ್ಲಿ ಮದುಮಗಳ ಅಲಂಕಾರ ಎಂದರೆ ಮಲ್ಲಿಗೆ, ಗುಲಾಬಿ, ಸುಗಂಧರಾಜ ಹೂವುಗಳೇ ಬೇಕಿತ್ತು. ಆದರೆ ಇಂದಿನ ಫ್ಯಾಷನ್ ಟ್ರೆಂಡ್ ಬದಲಾಗಿದೆ. ಈಗ ಮದುಮಗಳ ಅಲಂಕಾರಕ್ಕೆ ದುಬಾರಿ ಹೂವುಗಳೇ ಆಗಬೇಕಿಲ್ಲ. ಮನೆಯಂಗಳದಲ್ಲಿ ನಿತ್ಯವೂ ಅರಳುವ, ಬೇಲಿ ಬದಿಯಲ್ಲಿ ಯಾರ ಹಂಗಿಲ್ಲದೆ ಅರಳಿ ನಸುನಗುವ ಹೂಗೊಂಚಲುಗಳು ನಾರಿಯರ ಮುಡಿಯಲ್ಲಿ ವಿವಿಧ ವಿನ್ಯಾಸಗಳಲ್ಲಿ ಕಂಗೊಳಿಸುತ್ತವೆ. ನೋಡುಗರ ಕಣ್ಣುಗಳನ್ನು ಸೆಳೆಯಬೇಕಾದರೆ ವಿನ್ಯಾಸಕಿಗೆ ಕೈಚಳಕ ಇದ್ದರೆ ಸಾಕು. ಯುಕ್ತಿ, ಶ್ರದ್ಧೆ ಇದ್ದರೆ ಹೂವುಗಳು ಬಗೆಬಗೆಯ ವಿನ್ಯಾಸಗಳಲ್ಲಿ ಅರಳಿ ಚೆಲುವು ಸೂಸುತ್ತವೆ.

'ಹೂವುಗಳು ಮುಡಿಗಷ್ಟೇ ಅಲ್ಲ, ಕುತ್ತಿಗೆ, ಕಿವಿಗಳಿಗೆ ಆಭರಣದಂತೆಯೂ ಧರಿಸಬಹುದು. ಚೆಂಡು ಹೂವು, ಸೇವಂತಿಗೆ, ಧವನ, ಮರುಗ, ಪನ್ನೀರು ಎಲೆಗಳನ್ನು ಸೇರಿಸಿ ಸುಂದರ ವಿನ್ಯಾಸ ಮಾಡಬಹುದು. ಕ್ಯಾಕ್ಟಸ್ ಹೂವು ಕೂಡ ಅಂದದಿಂದ ಮೆರುಗು ನೀಡುತ್ತವೆ. ಮರಳುಗಾಡಿನ ಪುಷ್ಪಗಳೂ ತರಾವರಿ ರೂಪ ತಳೆಯುತ್ತವೆ. ಎತ್ತಿಕಟ್ಟಿದ ತುರುಬಿನ ಸುತ್ತ ಕಾಡುಹೂವುಗಳಿಂದ ಅಲಂಕಾರ ಮಾಡಿದರೆ ನೋಡುಗರು ಹುಬ್ಬೇರಿಸದೇ ಇರಲಾರರು. ಸೀತಾಳೆ ಹೂವುಗಳೂ ತುರುಬನ್ನು ಅಲಂಕರಿಸಿ ಹೊಸ ರೂಪ ಪಡೆಯುತ್ತವೆ' ಎಂದು ಹೇಳುತ್ತಾರೆ ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಸೌಂದರ್ಯತಜ್ಞೆ ಉಮಾ ಜಯಕುಮಾರ್.

ಅಂದಹಾಗೆ ಹೂವಿನ ಅಂದ ಚಂದ ಚಿತ್ತಾರವನ್ನು ವರ್ಣಿಸುವ ಈ ಸಂದರ್ಭದಲ್ಲಿ 'ಶುಭಮಂಗಳ' ಸಿನಿಮಾದ ಎನ್.ಆರ್. ಸುದರ್ಶನ್ ಗಾಯನ ಮಧುರಾತಿಮಧುರ ಹಾಡೊಂದು ನೆನಪಿಗೆ ಬರುತ್ತಿದೆ. 'ಹೂವೊಂದು ಬಳಿ ಬಂದು ತಾಕಿತು ಎನ್ನೆದೆಯಾ.. ಹೇಳಿತು.. ಹೆಣ್ಣೇ... ನೀ ನನ್ನಷ್ಟೇ ಚೆಲುವೆ...'